**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

**ವಿಷಯ:** ಪ್ರಾದೇಶಿಕ ಸಂಪರ್ಕ ಯೋಜನೆ – ಉಡಾನ್ ರಡಿ ಆಯ್ಕೆಯಾದ ವಿಮಾನ ನಿಲ್ದಾಣಗಳಿಗೆ ವಿ.ಜಿ.ಎಫ್ ಬಿಡುಗಡೆ ಮಾಡುವ ಬಗ್ಗೆ.

**ಓದಲಾಗಿದೆ:**

1. ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ ಕರ್ನಾಟಕ ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ MoU ದಿನಾಂಕ 20/04/2017.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಮೂಅಇ 90 ರಾಅವಿ 2016, ದಿನಾಂಕ 28/04/2017.
3. ಜನರಲ್ ಮ್ಯಾನೇಜರ್ (ಎಫ್&ಎ) – ಆರ್‌ಸಿಎಸ್, Regional Air Connectivity Fund Trust ಇವರ ಪತ್ರ ಸಂಖ್ಯೆ: MOCA/AAI/ RCS/RACFT/VGF SHARE CLAIM/KA/25/2017/ 427, ದಿನಾಂಕ: 25.03.2019.
4. ಜನರಲ್ ಮ್ಯಾನೇಜರ್ (ಎಫ್&ಎ) – ಆರ್‌ಸಿಎಸ್, Regional Air Connectivity Fund Trust ಇವರ ಪತ್ರ ಸಂಖ್ಯೆ: MOCA/AAI/ RCS/RACFT/VGF SHARE CLAIM/KA/25/2017/ 498, ದಿನಾಂಕ: 25.04.2019.
5. ಜನರಲ್ ಮ್ಯಾನೇಜರ್ (ಎಫ್&ಎ) – ಆರ್‌ಸಿಎಸ್, Regional Air Connectivity Fund Trust ಇವರ ಪತ್ರ ಸಂಖ್ಯೆ: MOCA/AAI/ RCS/RACFT/VGF SHARE CLAIM/KA/25/2017/ 458, ದಿನಾಂಕ: 5.04.2019.
6. ಜನರಲ್ ಮ್ಯಾನೇಜರ್ (ಎಫ್&ಎ) – ಆರ್‌ಸಿಎಸ್, Regional Air Connectivity Fund Trust ಇವರ ಪತ್ರ ಸಂಖ್ಯೆ: MOCA/AAI/ RCS/RACFT/VGF SHARE CLAIM/KA/25/2017/ 558, ದಿನಾಂಕ: 07.05.2019.

****

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರ ಒಡಂಬಡಿಕೆಯಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ (MOCA) ಮತ್ತು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರವು (ಎಎಐ) ಕರ್ನಾಟಕ

ರಾಜ್ಯದಲ್ಲಿ ಪ್ರಾದೇಶಿಕ ಸಂಪರ್ಕ ಯೋಜನೆಯನ್ನು (RCS) ರಾಜ್ಯ ಸರ್ಕಾರದೊಂದಿಗೆ ಅನುಷ್ಠಾನಗೊಳಸಲು ದಿನಾಂಕ:20/04/2017 ರಂದು ಒಡಂಬಡಿಕೆಯನ್ನು ಮಾಡಿಕೊಂಡಿರುತ್ತದೆ.

2. ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರದ ಅಧಿಸೂಚನೆಯನ್ವಯ RCS ರಡಿ ಆಯ್ಕೆಯಾಗಿರುವ ವಿಮಾನ ನಿಲ್ದಾಣಗಳಿಗೆ ಭದ್ರತೆ ಮತ್ತು ಅಗ್ನಿಶಾಮಕ ಸೇವೆಯನ್ನು ಹಾಗೂ ಕೆಲವು ರಿಯಾಯಿತಿಗಳನ್ನು ನೀಡಲಾಗಿರುತ್ತದೆ. ಅದರಂತೆ RCS ರಡಿ ಆಯ್ಕೆಯಾಗಿರುವ ಏರ್‌ಲೈನ್ ಆಪರೇಟರ್‌ಗಳಿಗೆ ಕೇಂದ್ರ ಸರ್ಕಾರದಿಂದ ನೀಡುತ್ತಿರುವ ವಿಜಿಎಫ್ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ 20% ರಷ್ಟು ವಿಜಿಎಫ್‌ನ್ನು ಆಯ್ಕೆಯಾದ ವಿಮಾನ ನಿಲ್ದಾಣಗಳಿಗಾಗಿ ಭರಿಸಬೇಕಾಗಿರುತ್ತದೆ.

3. ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದಲ್ಲಿ GM(F&A)-RCS, MoCA ಇವರು ಮೆ॥ಟರ್ಬೋ ಮೇಘಾ ಏರ್‌ವೇಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಚೆನ್ನೈ – ಮೈಸೂರು- ಚೆನ್ನೈ , ಹೈದ್ರಾಬಾದ್-ವಿದ್ಯಾನಗರ-ಹೈದ್ರಾಬಾದ್ ಮತ್ತು ಬೆಂಗಳೂರು- ವಿದ್ಯಾನಗರ- ಬೆಂಗಳೂರಿಗೆ ಜನವರಿ-2019ರಲ್ಲಿ ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂಧಪಟ್ಟಂತೆ ಪಾವತಿಸಬೇಕಾಗಿರುವ ವಿ.ಜಿ.ಎಫ್. ಮೊತ್ತ ರೂ.2,77,16,976/-ಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.20 ರಷ್ಟು ಮೊತ್ತ ರೂ.55,43,395/-ಗಳನ್ನು ರಾಜ್ಯ ಸರ್ಕಾರದಿಂದ ಮರು ಪಾವತಿಸಲು ಕೋರಿರುತ್ತಾರೆ.

4. ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ GM(F&A)-RCS, MoCA ಇವರು ಮೆ॥ಟರ್ಬೋ ಮೇಘಾ ಏರ್‌ವೇಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಚೆನ್ನೈ – ಮೈಸೂರು- ಚೆನ್ನೈ , ಹೈದ್ರಾಬಾದ್-ವಿದ್ಯಾನಗರ-ಹೈದ್ರಾಬಾದ್ ಮತ್ತು ಬೆಂಗಳೂರು- ವಿದ್ಯಾನಗರ- ಬೆಂಗಳೂರಿಗೆ ಫೆಬ್ರವರಿ-2019ರಲ್ಲಿ ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂಧಪಟ್ಟಂತೆ ಪಾವತಿಸಬೇಕಾಗಿರುವ ವಿ.ಜಿ.ಎಫ್. ಮೊತ್ತ ರೂ.2,50,34,688/-ಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.20 ರಷ್ಟು ಮೊತ್ತ ರೂ.50,06,938/-ಗಳನ್ನು ರಾಜ್ಯ ಸರ್ಕಾರದಿಂದ ಮರು ಪಾವತಿಸಲು ಕೋರಿರುತ್ತಾರೆ.

5. ಮೇಲೆ ಓದಲಾದ ಕ್ರಮ ಸಂಖ್ಯೆ (5) ರ ಪತ್ರದಲ್ಲಿ GM(F&A)-RCS, MoCA ಇವರು ಮೆ॥ಗೋಡಾವತ್ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯಿಂದ ಹುಬ್ಬಳ್ಳಿ-ತಿರುಪತಿ-ಹುಬ್ಬಳ್ಳಿಗೆ 25-31.1.2019ರವರೆಗೆ ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂಧಪಟ್ಟಂತೆ ಪಾವತಿಸಬೇಕಾಗಿರುವ ವಿ.ಜಿ.ಎಫ್. ಮೊತ್ತ ರೂ.15,93,000/-ಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.20 ರಷ್ಟು ಮೊತ್ತ ರೂ.3,18,600/-ಗಳನ್ನು ರಾಜ್ಯ ಸರ್ಕಾರದಿಂದ ಮರು ಪಾವತಿಸಲು ಕೋರಿರುತ್ತಾರೆ.

6. ಮೇಲೆ ಓದಲಾದ ಕ್ರಮ ಸಂಖ್ಯೆ (6) ರ ಪತ್ರದಲ್ಲಿ GM(F&A)-RCS, MoCA ಇವರು ಮೆ॥ ಗೋಡಾವತ್ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ॥ಇಂಟರ್‌ಗ್ಲೋಬ್ ಏವಿಯೇಷನ್ ಲಿಮಿಟೆಡ್ ಸಂಸ್ಥೆಯಿಂದ ಹುಬ್ಬಳ್ಳಿ –ತಿರುಪತಿ- ಹುಬ್ಬಳ್ಳಿ ಮತ್ತು ಕೊಚ್ಚಿನ್ -ಹುಬ್ಬಳ್ಳಿ-ಗೋವಾ-ಹುಬ್ಬಳ್ಳಿ-ಕೊಚ್ಚಿನ್ 2018-19ರ (ಫೆಬ್ರವರಿ-2019 ರಿಂದ ಮಾರ್ಚ್-2019 ಮತ್ತು ಅಕ್ಟೋಬರ್-2018 ರಿಂದ ಡಿಸೆಂಬರ್-2018, ಜನವರಿ-2019ವರೆಗೆ) ವಿಮಾನಯಾನ ಸೇವೆಯನ್ನು ಒದಗಿಸಲಾಗಿದ್ದು, ಕೈಗೊಂಡಿರುವ ವಿಮಾನಯಾನ ಸೇವೆಗೆ ಸಂಬಂಧಪಟ್ಟಂತೆ ಪಾವತಿಸಬೇಕಾಗಿರುವ ವಿಜಿಎಫ್ ಮೊತ್ತ ರೂ.7,95,02,934/-ಗಳಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.20ರಷ್ಟು ರೂ.1,59,00,587/-ಗಳನ್ನು ರಾಜ್ಯ ಸರ್ಕಾರದಿಂದ ಮರು ಪಾವತಿಸಲು ಕೋರಿರುತ್ತಾರೆ.

7. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ. ಮೂಅಇ 24 ರಾಅವಿ 2018,**
**ಬೆಂಗಳೂರು, ದಿನಾಂಕ:30.05.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಮೆ॥ ಟರ್ಬೋ ಮೇಘಾ ಏರ್‌ವೇಸ್ ಪ್ರೈವೇಟ್ ಲಿಮಿಟೆಡ್ ಏರ್‌ಲೈನ್, ಮೆ॥ ಗೋಡಾವತ್ ಎಂಟರ್‌ಪ್ರೈಸೆಸ್ ಪ್ರೈವೇಟ್ ಲಿಮಿಟೆಡ್ ಮತ್ತು ಮೆ॥ಇಂಟರ್‌ಗ್ಲೋಬ್ ಏವಿಯೇಷನ್ ಲಿಮಿಟೆಡ್ ಸಂಸ್ಥೆಯಿಂದ 2018-2019 ರಲ್ಲಿ ಕೈಗೊಂಡಿದ್ದ ವಿಮಾನಯಾನ ಸೇವೆಗಳಿಗಾಗಿ ನೀಡಬೇಕಾಗಿರುವ ವಿ.ಜಿ.ಎಫ್ ಮೊತ್ತದಲ್ಲಿ ರಾಜ್ಯ ಸರ್ಕಾರದ ಪಾಲಿನ ಶೇ.20 ರಂತೆ ರೂ.2,67,69,520/- (ಎರಡು ಕೋಟಿ ಅರವತ್ತೇಳು ಲಕ್ಷದ ಅರತ್ತೊಂಬತ್ತು ಸಾವಿರದ ಐದುನೂರಾ ಇಪ್ಪತ್ತು ರೂಪಾಯಿಗಳು ಮಾತ್ರ) ಗಳನ್ನು ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮರುಪಾವತಿಸಲು ಸರ್ಕಾರವು ಮಂಜೂರಾತಿ ನೀಡಿದೆ.

- ಸರ್ಕಾರದ ಅಧಿಸೂಚನೆ ದಿನಾಂಕ:28.04.2017 ಯನ್ವಯ ಹಾಗೂ ಉಡಾನ್ ಯೋಜನೆಯಡಿಯಲ್ಲಿ ಕೇಂದ್ರ ನಾಗರೀಕ ವಿಮಾನಯಾನ ಮಂತ್ರಾಲಯ ಮತ್ತು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ), ಇವರು ರಾಜ್ಯ ಸರ್ಕಾರದೊಂದಿಗೆ ಮಾಡಿಕೊಂಡಿರುವ ದಿನಾಂಕ:20.04.2017ರ ಒಪ್ಪಂದದ ಅನುಸಾರ ಕ್ರಮವಹಿಸುವುದು ಹಾಗೂ ಬಿಡುಗಡೆಗೂ ಮುನ್ನ ಪರಿಶೀಲಿಸಿ ನಂತರ ಬಿಡುಗಡೆ ಮಾಡತಕ್ಕದ್ದು.
- ಬಿಡುಗಡೆ ಮಾಡಲಾದ ಅನುದಾನಕ್ಕೆ ಬಳಕೆ ಪ್ರಮಾಣ ಪತ್ರವನ್ನು ಕೂಡಲೇ ಸಲ್ಲಿಸತಕ್ಕದ್ದು ಹಾಗೂ ವಿ.ಜಿ.ಎಫ್ ಮೊತ್ತದ ಬಗ್ಗೆ ದಾಖಲೆಗಳನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

2. ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ "3451-00-090-1-18-059-ಪ್ರಾದೇಶಿಕ ವಾಯು ಸಂಪರ್ಕ – ಇತರೆ ಖರ್ಚುಗಳು" ರಡಿಯಲ್ಲಿ 2019-20ನೇ ಸಾಲಿನಲ್ಲಿ ಒದಗಿಸಿರುವ ಆಯವ್ಯಯದಿಂದ ಭರಿಸತಕ್ಕದ್ದು.

3. ಈ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಬೆಂಗಳೂರು, ಇವರು ಪೇಯೀಸ್ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿಸಿದೆ.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 01 ಟಿಎಫ್‌ಪಿ 2019, ದಿನಾಂಕ:03.04.2019ರಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯರವರಿಗೆ ನೀಡಿರುವ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
Sd/-

**(ಬಿ.ಎಸ್.ಮಂಜುನಾಥ್)**
ಸರ್ಕಾರದ ಅಧೀನ ಕಾರ್ಯದರ್ಶಿ,
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

**ಪ್ರತಿ:**

1. ಪ್ರಧಾನ ಮಹಾಲೇಖಪಾಲರು (ಆಡಿಟ್ –1, 2, 3/ ಂ & ಇ), ಪ್ರಧಾನ ಮಹಾಲೇಖಪಾಲರ ಕಛೇರಿ (ಕರ್ನಾಟಕ), ಎ.ಎ.ಡಿ. ಸೆಕ್ಷನ್, ಮೈನ್ ಬಿಲ್ಡಿಂಗ್, ಕೆ.ಪಿ.ಎಸ್.ಸಿ. ಕಛೇರಿ ಎದುರು, ಬೆಂಗಳೂರು – 560 001.
2. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ,ಐ.ಡಿ.ಸಿ, ಖನಿಜ ಭವನ ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
3. ನಿರ್ದೇಶಕರು, ಖಜಾನೆ ಇಲಾಖೆ, ವಿ.ವಿ. ಗೋಪುರ, ಬೆಂಗಳೂರು.
4. ಜಂಟಿ ನಿದೇಶಕರು, ರಾಜ್ಯ ಹುಜೂರು ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು-02
5. ಹಿರಿಯ ನಿರ್ದೇಶಕರು, ಯೋಜನೆ ಹಾಗೂ ಸಂಪನ್ಮೂಲ ವಿಭಾಗ, ಯೋಜನೆ ಇಲಾಖೆ, ಬೆಂಗಳೂರು
6. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ಬೆಂಗಳೂರು,
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1).
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
10. ಉಪ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
11. ಸರ್ಕಾರದ ಅಧೀನ ಕಾರ್ಯದರ್ಶಿ, ಸಮನ್ವಯ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
12. ಶಾಖಾ ರಕ್ಷಾ ಕಡತ / ಬಿಡಿ ಪ್ರತಿಗಳು.

***